:ಬೆಂಗಳೂರು ನಗರ ಜಿಲ್ಲಾ ಪಂಚಾಯತ್:

ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು-02

ಸಂಖ್ಯೆ:ಆ4/ಇತರೆ/ಪ.ವೇ.ಪ/2019-20 ದಿನಾಂಕ:26/02/2020

**ಜ್ಞಾಪನ**

**ವಿಷಯ: 2019-20ನೇ ಸಾಲಿನ 8 ಮತ್ತು 9ನೇ ತರಗತಿ ಪರೀಕ್ಷೆಗಳನ್ನು ನಡೆಸುವ ಬಗ್ಗೆ.**

**ಉಲ್ಲೇಖ: 1. ಮಾನ್ಯ ಆಯುಕ್ತರ ಕಛೇರಿ ಸುತ್ತೋಲೆ ಸಂಖ್ಯೆ: ಸಿ4(6) ಸ.ಪ್ರೌ.ಶಾ.ಪ/ ಪತ್ರಸ್ವರೂಪ/07/209-20 ದಿನಾಂಕ:07/02/2020.**

**2. ಕ.ಪ್ರೌ.ಶಿ.ಪ.ಮಂ.ಬೆಂಗಳೂರು ಇವರ ಜ್ಞಾಪನ ಸಂಖ್ಯೆ:ಸಿ1/ಎಸ್.ಎಸ್. ಎಲ್.ಸಿ/ಎಂ.ಪಿಕ್/ಸಭೆ/08/2019-20 ದಿನಾಂಕ:21/06/2019**

************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ 2019-20ನೇ ಸಾಲಿನ 8 ಮತ್ತು 9ನೇ ತರಗತಿಗಳಿಗೆ 10ನೇ ತರಗತಿ ಮಾದರಿಯಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಸಿದ್ದಪಡಿಸಿ ಪರೀಕ್ಷೆಗಳನ್ನು ನಡೆಸುವ ಬಗ್ಗೆ ಮಾರ್ಗದರ್ಶನವನ್ನು ನೀಡಲಾಗಿರುತ್ತದೆ.

8ನೇ ತರಗತಿಗೆ ಈಗಾಗಲೇ ನಾಲ್ಕು ರೂಪಣಾತ್ಮಕ ಹಾಗೂ ಮೊದಲ ಸಂಕಲನಾತ್ಮಕ ಮೌಲ್ಯಮಾಪನದ ಮಕ್ಕಳ ಸಾಧನಾ ಮಟ್ಟದ 70 ಅಂಕಗಳನ್ನು ಗ್ರೇಡ್‌ಗಳಿಗೆ ಪರಿವರ್ತಿಸಿಕೊಂಡು ಎಸ್.ಎ.ಟಿ.ಎಸ್.ನಲ್ಲಿ ದಾಖಲಿಸಲು ಶಿಕ್ಷಕರು ಕ್ರಮವಹಿಸಿರುತ್ತಾರೆ. ಎರಡನೇ ಸಂಕಲನಾತ್ಮಕ ಮೌಲ್ಯ ಮಾಪನದಲ್ಲಿ 50 ಅಂಕಗಳಿಗೆ (40 ಅಂಕಗಳಿಗೆ ಲಿಖಿತ ಮತ್ತು 10 ಅಂಕಗಳಿಗೆ ಮೌಖಿಕ) ಪರೀಕ್ಷೆ ನಡೆಸಿ 30 ಅಂಕಗಳಿಗೆ ಪರಿವರ್ತಿಸಿಕೊಂಡು ಎಸ್.ಎ.ಟಿ.ಎಸ್.ನಲ್ಲಿ ದಾಖಲಿಸಲು ಕ್ರಮವಹಿಸುವುದು. ಹಾಗೂ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆಗಳಿಗಲ್ಲಿನ 8ನೇ ತರಗತಿಯ ಪರೀಕ್ಷೆಯನ್ನು ಇದೆ ಮಾದರಿಯಲ್ಲಿ ನಡೆಸಲು ಕ್ರಮವಹಿಸುವುದು.

9ನೇ ತರಗತಿಗೆ 10ನೇ ತರಗತಿಯ ಪ್ರಶ್ನೆ ಪತ್ರಿಕೆ ಮಾದರಿಯಲ್ಲಿ ಪ್ರಥಮ ಭಾಷೆ 100 ಅಂಕಗಳಿಗೆ ಹಾಗೂ ಉಳಿದ ಭಾಷೆಗಳಿಗೆ ( ದ್ವಿತೀಯ ಮತ್ತು ತೃತೀಯ)ಮತ್ತು ಕೋರ್ ವಿಷಯಗಳಿಗೆ 80 ಅಂಕಗಳಿಗೆ ಪ್ರಶ್ನೆ ಪತ್ರಿಕೆ ಸಿದ್ದಪಡಿಸಿ ಪರೀಕ್ಷೆ ನಡೆಸುವುದು.

9ನೇ ತರಗತಿಗೆ ಈಗಾಗಲೇ ನಾಲ್ಕು ರೂಪಣಾತ್ಮಕ ಹಾಗೂ ಮೊದಲ ಸಂಕಲನಾತ್ಮಕ ಮೌಲ್ಯಮಾಪನದ ಮಕ್ಕಳ ಸಾಧನಾ ಮಟ್ಟದ 40 ಅಂಕಗಳನ್ನು ಗ್ರೇಡ್‌ಗಳಿಗೆ ಪರಿವರ್ತಿಸಿಕೊಂಡು ಎಸ್.ಎ.ಟಿ.ಎಸ್.ನಲ್ಲಿ ದಾಖಲಿಸಲು ಕ್ರಮವಹಿಸಲಾಗಿದೆ. ಈಗ 100 ಅಂಕಗಳಿಗೆ ಪ್ರಥಮ ಭಾಷೆ 80 ಅಂಕಗಳಿಗೆ ಉಳಿದ ಭಾಷೆಗಳಿಗೆ ( ದ್ವಿತೀಯ ಮತ್ತು ತೃತೀಯ)ಮತ್ತು ಕೋರ್ ವಿಷಯಗಳಿಗೆ ಪ್ರಶ್ನೆ ಪತ್ರಿಕೆ ಸಿದ್ದಪಡಿಸಿ ಪರೀಕ್ಷೆ ನಡೆಸಿ 60 ಅಂಕಗಳಿಗೆ ಪರಿವರ್ತಿಸಿಕೊಂಡು ಗ್ರೇಡ್‌ಗಳನ್ನು ದಾಖಲಿಸಲು ಕ್ರಮವಹಿಸುವುದು.

ಉಲ್ಲೇಖ(1)ರ ಸುತ್ತೋಲೆಯಂತೆ 8ನೇ ತರಗತಿಯ ಪ್ರಶ್ನೆ ಪತ್ರಿಕೆ ವಿನ್ಯಾಸ ಲಗತ್ತಿಸಿದೆ. ದಿನಾಂಕ: 21/06/2019 ಮತ್ತು 07/02/2020 ಸುತ್ತೋಲೆಗಳು ಪರೀಕ್ಷಾ ಮಂಡಳಿ ವೆಬ್‌ಸೈಟ್‌ನಲ್ಲಿ ಲಭ್ಯವಿದ್ದು ಪರಾಮರ್ಶಿಸಲು ಸೂಚಿಸಿದೆ.

Generated by CamScanner

ಜಿಲ್ಲೆಯಲ್ಲಿ 8 ಮತ್ತು 9ನೇ ತರಗತಿಗಳ ಪರೀಕ್ಷೆಗಳನ್ನು ನಡೆಸುವ ಸಂಬಂಧ ಏಕ ರೂಪದ ವೇಳಾ ಪಟ್ಟಿಯನ್ನು ಸಿದ್ದಪಡಿಸಲಾಗಿರುತ್ತದೆ. ವೇಳಾ ಪಟ್ಟಿ ವಿವರ ಈ ಕೆಳಕಂಡಂತಿರುತ್ತದೆ.

| ದಿನಾಂಕ | ವಿಷಯ | ಸಮಯ | |
|---|---|---|---|
| | | 8ನೇ ತರಗತಿ | 9ನೇ ತರಗತಿ |
| 16-03-2020 | ಗಣಿತ | 2.00 ರಿಂದ 3.30 | 9.30 ರಿಂದ 12.45 |
| 17-03-2020 | ಪ್ರಥಮ ಭಾಷೆ | 2.00 ರಿಂದ 3.30 | 9.30 ರಿಂದ 12.45 |
| 18-03-2020 | ವಿಜ್ಞಾನ | 2.00 ರಿಂದ 3.30 | 9.30 ರಿಂದ 12.45 |
| 19-03-2020 | ದ್ವಿತಿಯ ಭಾಷೆ | 2.00 ರಿಂದ 3.30 | 9.30 ರಿಂದ 12.30 |
| 20-03-2020 | ಸಮಾಜ ವಿಜ್ಞಾನ | 2.00 ರಿಂದ 3.30 | 9.30 ರಿಂದ 12.45 |
| 21-03-2020 | ತೃತೀಯ ಭಾಷೆ | 2.00 ರಿಂದ 3.30 | 9.30 ರಿಂದ 12.30 |
| 22-03-2020 | ಭಾನುವಾರ | ರಜಾ ದಿನ | |
| 23-03-2020 | ದೈಹಿಕ ಶಿಕ್ಷಣ | 2.00 ರಿಂದ 3.30 | 9.30 ರಿಂದ 11.00 |
| 24-03-2020 | ಎಸ್.ಯು.ಪಿ.ಡಬ್ಲ್ಯೂ ಕ್ರಾಫ್ಟ್/ಗಣಕಯಂತ್ರ/ಡ್ರಾಯಿಂಗ್ | 2.00 ರಿಂದ 3.30 | 9.30 ರಿಂದ 11.00 |

ಷರಾ: ಪದವಿ ಪೂರ್ವ ಕಾಲೇಜುಗಳಲ್ಲಿನ ಪ್ರೌಢಶಾಲಾ ವಿಭಾಗಗಳಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಗಳು ನಡೆಯುತ್ತಿದ್ದಲ್ಲಿ ಉಪನಿರ್ದೇಶಕರ ಅನುಮತಿಯೊಂದಿಗೆ ಸಮಯ ಬದಲಾವಣೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

(ಎಸ್.ರಾಜೇಂದ್ರ)
ಉಪನಿರ್ದೇಶಕರು(ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ

ಪ್ರತಿಯನ್ನು:
1. ಜಿಲ್ಲೆಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.
2. ಜಿಲ್ಲೆಯ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಪ್ರೌಢಶಾಲೆಗಳ ಮುಖ್ಯ ಶಿಕ್ಷಕರಿಗೆ ಸೂಕ್ತ ಕ್ರಮಕ್ಕಾಗಿ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ)
3. ಕಛೇರಿ ಪ್ರತಿ.

Generated by CamScanner